ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರಃ 1910/2021

ಚಾಸಾಃ 1 ಪ್ರಾಸಾಃ2

ದಿನಾಂಕಃ 07.07.2025

ವಾಗ್ಮೂಲದವರ ಹೆಸರು : ಶ್ರೀ ರಾಜೇಶ್ ನಾಯ್ಕ
ತಂದೆಯ ಹೆಸರು : ವೆಂಕಟರಮಣ ನಾಯ್ಕ
ವಯಸ್ಸು : 52 ವರ್ಷ
ಉದ್ಯೋಗ : ಅಬಕಾರಿ ಉಪಾಧೀಕ್ಷಕರು
ವಾಸ ಸ್ಥಳ : ಹಾಸನ

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

<u>**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ**</u>

ನಾನು ದಿಃ12-03-2020 ರಿಂದ ದಿಃ 15-03-2021ರವರೆಗೆ ಅಬಕಾರಿ ಉಪನಿರೀಕ್ಷಕನಾಗಿ ಹೆಚ್ಚುವರಿ ಪ್ರಭಾರದಲ್ಲಿ ಕುಂದಾಪುರ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 02-10-2020 ರಂದು ಸಂಜೆ 6 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-4 ರವರು ಚಾಸಾ-5 ರಿಂದ 7 ರವರೊಂದಿಗೆ ಸರಕಾರಿ ವಾಹನ ಸಂಖ್ಯೆ ಕೆಎ-20-ಜಿ-0559 ರಲ್ಲಿ ಗಾಂಧಿ ಜಯಂತಿ ಪ್ರಯುಕ್ತ ಮದ್ಯ ನಿಶೇಧ ಇರುವುದರಿಂದ ಸಿದ್ದಾಪುರ ಗ್ರಾಮದಲ್ಲಿ ಗಸ್ತು ತಿರುಗುತ್ತಿದ್ದಾಗ ನನಗೆ ಬಂದ ಖಚಿತ ಮಾಹಿತಿ ಮೇರೆಗೆ ಅಜ್ರಿ ಗ್ರಾಮದ ಕಡೆಗೆ ತೆರಳಿದ್ದು, ಈ ಬಗ್ಗೆ ಅಜ್ರಿ ಪೇಟೆಯಲ್ಲಿ ಪಂಚರು ಸಿಗುತ್ತಾರೆ ಎಂದು ಪರಿಶೀಲಿಸಲಾಗಿ ಇಬ್ಬರು ವ್ಯಕ್ತಿಗಳು ಸಿಕ್ಕಿದ್ದು, ಅವರಿಗೆ ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿರುವಂತೆ ಒಪ್ಪಿ ಕೊಂಡಿರುತ್ತಾರೆ.

ಅದರಂತೆ ನಾವೆಲ್ಲರೂ ಸದ್ರಿ ಸ್ಥಳಕ್ಕೆ ಹೋಗಿ ದಾಳಿ ನಡೆಸಿದ್ದು, ಆ ಸಮಯದಲ್ಲಿ ಒಬ್ಬ ವ್ಯಕ್ತಿ ಓಡಿ ಪರಾರಿಯಾಗಿರುತ್ತಾನೆ. ಆ ಮನೆಯನ್ನು ಶೋಧಿಸಬೇಕಾಗಿದ್ದು, ನ್ಯಾಯಾಲಯದಿಂದ ವಾರಂಟ್ ಪಡೆಯಲು ಸಾಧ್ಯವಾಗದೆ ಇದ್ದುದರಿಂದ ಕರ್ನಾಟಕ

ಅಬಕಾರಿ ಕಾಯಿದೆ 54ರ ಪ್ರಕಾರ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿ ಪಂಚರ ಸಮಕ್ಷಮದಲ್ಲಿ ಸೀತಾರಾಮ ಶೆಟ್ಟಿ, ಬಿನ್ಃ ಹಿರಿಯಣ್ಣ ಶೆಟ್ಟಿ ರವರ ಮನೆ ನಂಬ್ರ 3/76 ಆಗಿದ್ದು, ಮನೆಯ ಒಳಗಡೆ ಹಾಲ್ ನಲ್ಲಿ ಬಿಳಿ ಬಣ್ಣದ ಪಾಲಿಥೀನ್ ಚೀಲವಿದ್ದು, ಅದರ ಒಳಗೆ 2 ರಟ್ಟಿನ ಪೆಟ್ಟಿಗೆಗಳು ಇದ್ದು, ಮೊದಲನೇಯದರಲ್ಲಿ 180 ಮಿಲಿಯ 48 ಮೈಸೂರು ಲ್ಯಾನ್ಸರ್ Whiskeyಯ ಟೇಟ್ರಾ ಪ್ಯಾಕೇಟುಗಳು, ಇನ್ನೋದರಲ್ಲಿ ಮೈಸೂರು ಲ್ಯಾನ್ಸರ್ Whiskeyಯ 90 ಮಿಲಿಯ 48 ಪ್ಲಾಸ್ಟಕ್ ಬಾಟಲಿಗಳು ದೊರೆತಿರುತ್ತದೆ. ಒಟ್ಟು 12.960 ಲೀಟರ್ ಮದ್ಯ ದೊರಕಿರುತ್ತದೆ.

ಈ ಸಂಬಂಧ ಓಡಿ ಹೋದ ಆರೋಪಿತನನ್ನು ಚಾಸಾ-5 ರವರು ಗುರುತಿಸಿರುತ್ತಾರೆ. ಆತ ಓಡಿ ಹೋಗಿ ಬೆನ್ನಟ್ಟಿ ಹೋದರೂ ಸಹ ಆರೋಪಿ ಸಿಕ್ಕಿರುವುದಿಲ್ಲ. ಬಾಟಲಿಗಳ ಮೇಲಿರುವ ಭದ್ರತಾ ಚೀಟಿಯನ್ನು ಹರಿದಿರುತ್ತಾರೆ. ನಂತರ ದೊರೆತ ಮುದ್ದೆ ಮಾಲಿಗಳಿಂದ ಕ್ರಮ ಸಂಖ್ಯೆ 1 ರಲ್ಲಿ 10 ಟೇಟ್ರಾ ಪ್ಯಾಕೇಟು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿಗಾಗಿ ತೆಗೆಯಲಾಯಿತು. ಕ್ರಮ ಸಂಖ್ಯೆ 2 ರಲ್ಲಿ 10 ಟೇಟ್ರಾ ಪ್ಯಾಕೇಟು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿಗಾಗಿ ತೆಗೆಯಲಾಯಿತು. ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಮೊಹರನ್ನು ಲಗತ್ತಿಸಲಾಯಿತು. ಅನಂತರದಲ್ಲಿ ಮಾದರಿ ಮೊಹರು ಪತ್ರವನ್ನು ತಯಾರಿಸಿರುತ್ತೇವೆ.

ಕರ್ನಾಟಕ ಅಬಕಾರಿ ಕಾಯಿದೆಯ ಉಲ್ಲಂಘಟನೆಯಾಗಿರುವುದರಿಂದ ಓಡಿ ಹೋದ ಆರೋಪಿ ಸೀತಾರಾಮ ಶೆಟ್ಟಿ, ಬಿನ್ಃ ಹಿರಿಯಣ್ಣ ಶೆಟ್ಟಿ ರವರ ವಿರುದ್ದ ಪ್ರಕರಣ ದಾಖಲಿಸುವುದಾಗಿ ಎಲ್ಲಾ ಸ್ವತ್ತುಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಠಾಣೆಗೆ ಬಂದು ಪ್ರ.ವ.ವರದಿಯನ್ನು ದಾಖಲಿಸಿರುತ್ತೇನೆ.

ದಿಃ 03-10-2020 ರಂದು ನ್ಯಾಯಾಲಯಕ್ಕೆ ಸದ್ರಿ ದಾಖಲಾತಿಗಳೊಂದಿಗೆ ಪ್ರ.ವ.ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ಈ ಸಂಬಂಧ ಅಬಕಾರಿ ಉಪಾಯುಕ್ತರಿಗೆ ಸ್ವತ್ತು ಪಟ್ಟಿ ಹಾಗೂ ಪ್ರ.ವ.ವರದಿಯನ್ನು ಮಾಹಿತಿಗಾಗಿ ರವಾನಿಸಿರುತ್ತೇನೆ.

ಪ್ರಕರಣವನ್ನು ಮುಂದುವರೆಸಿ ದಿಃ 19-11-2020ರಂದು ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕೇಂದ್ರ ರಾಸಾಯನಿಕ ಪ್ರಯೋಗಲಾಯ, ಬೆಂಗಳೂರಿಗೆ ಪತ್ರ ಬರೆದಿರುತ್ತೇನೆ. ನಂತರ ಈ ಪ್ರಕರಣವನ್ನು ಅಬಕಾರಿ ಉಪ ನಿರೀಕ್ಷಕರಾದ ಚಾಸಾ-9ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ಪ್ರ.ವ.ವರದಿ, ಶೋಧನಾ ಸಮುಚ್ಚಯ, ಮಾದರಿ ಶೀಲುನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಗಳನ್ನು ನಿಪಿ-4 ರಿಂದ 6 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-4(ಎ) ರಿಂದ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-1 ಮತ್ತು 2 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1(ಬಿ) ಮತ್ತು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುಮಾ1 ಮತ್ತು 2 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ1(ಬಿ) ಮತ್ತು ಮುಮಾ2(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಟಿ ಜಿ ಆರ್ ರವರಿಂದಃ**

ತಕ್ಷೀರು ಸ್ಥಳಕ್ಕೆ ನಾವು 7 ಜನ ಸಿಬ್ಬಂದಿಗಳು ಮತ್ತು ಪಂಚರು ಹೋಗಿರುತ್ತೇವೆ. ನಾವು ಹೋದಾಗ ತಕ್ಷೀರು ಸ್ಥಳದಲ್ಲಿ ಒಬ್ಬರೇ ಇದ್ದರು ಅವರು ಓಡಿ ಹೋಗಿರುತ್ತಾರೆ. ಘಟನಾ ಸ್ಥಳ ಒಂದು ಮನೆ ಎಂದರೆ ಸರಿ. ಮನೆಯ ಬಾಗಿಲು ತೆಗೆದಿತ್ತು. ಮನೆಯಲ್ಲಿ ಆರೋಪಿಯನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಒಂದು ಹಾಲು, ಅಡುಗೆ ಕೋಣೆ ಹಾಗೂ ಒಂದು ರೂಂ ಇತ್ತು. ಆ ವಿಚಾರವನ್ನು ಪಂಚನಾಮೆಯಲ್ಲಿ ಕಾಣಿಸಬಹುದಾಗಿತ್ತು ಆದರೆ ಕಾಣಿಸಿಲ್ಲ. ಯಾವ ಕಾರಣಕ್ಕಾಗಿ ಕಾಣಿಸಿಲ್ಲ ಎಂದು ಹೇಳಲಾಗುವುದಿಲ್ಲ. ನಾವು ತಕ್ಷೀರು ಸ್ಥಳಕ್ಕೆ ಹೋದಾಗ ಸಂಜೆ 6-30 ಆಗಿತ್ತು. ಸುಮಾರು 7-30ರವರೆಗೂ ಸ್ಥಳದಲ್ಲಿ ಇದ್ದೇವು. ರಾತ್ರಿ ಸಮಯವಾಗಿದ್ದರಿಂದ ಕತ್ತಲೆಯಾಗಿತ್ತು ಎಂದರೆ ಸರಿ.

ನಾವು ಸ್ಥಳಕ್ಕೆ ಹೋದಾಗ ಓಡಿ ಹೋದ ವ್ಯಕ್ತಿ ಯಾರು ಎಂದು ಚಾಸಾ-5 ರವರಿಗೆ ತಿಳಿದು ಬಂದಿರುತ್ತದೆ. ಓಡಿ ಹೋದ ವ್ಯಕ್ತಿಗೆ ಸುಮಾರು 55 ವರ್ಷ ಆಗಿರಬಹುದು. ನಾವು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಸ್ವತಂತ್ರ ಸಾಕ್ಷಿಗಳ ಅವಶ್ಯಕತೆ ಇದ್ದ ಕಾರಣ ಪಂಚರನ್ನು ಕರೆದುಕೊಂಡು ಹೋಗಿರುತ್ತೇವೆ. ನಮ್ಮ ಇಲಾಖಾ ವತಿಯಿಂದ

ಪ್ರ.ವ.ವರದಿಯನ್ನು ನಾವೇ ದಾಖಲಿಸಿರುತ್ತೇವೆ ಎಂದರೆ ಸರಿ. ದಿಃ 02-10-2020 ರ ಸಂಜೆ 6-30ಕ್ಕೆ ಪ್ರ.ವ.ವರದಿ ದಾಖಲಿಸಿರುವುದಾಗಿ ಕಂಡು ಬರುತ್ತದೆ ಎಂದರೆ ಸರಿ. ಆ ವೇಳೆಯ ಸಂಜೆಯಲ್ಲಿ ಪ್ರ.ವ.ವರದಿಯ ದಾಖಲಾತಿ ಬಗ್ಗೆ ನಮ್ಮ ಕಚೇರಿಯ ಕಡತದಲ್ಲಿ ಇರುತ್ತದೆ. ಸದ್ರಿ ವರದಿಯನ್ನು ದಿಃ 03-10-2020ರಂದು ದಾಖಲಿಸಿರುವುದು ಎಂದರೆ ಸಾಕ್ಷಿ ಮರುದಿನ ಪ್ರಿಂಟ್ ಹಾಕಿರುವುದಾಗಿ ನುಡಿಯುತ್ತಾರೆ. ದಿಃ 02-10-2020 ರಂತೆ ಪ್ರ.ವ.ವರದಿ ದಾಖಲಾದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಪ್ರ.ವ.ವರದಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರ.ವ.ವರದಿಯಲ್ಲಿ ಎಲ್ಲಾ ಘಟನೆಯ ಬಗ್ಗೆ ವಿವರಣೆ ನೀಡಿರುತ್ತೇವೆ ಎಂದರೆ ಸರಿ. ಪ್ರ.ವ.ವರದಿಯ ಕಲಂ 9ರಲ್ಲಿ ವರದಿ ದಾಖಲಿಸಿದ ನಂತರ ಉಚಿತ ಪ್ರತಿಯನ್ನು ಪಿರ್ಯಾದುದಾರರಿಗೆ ವಿತರಿಸಲಾಗಿದೆ ಎಂದು ನಮೂದಿಸಿರುವುದಿಲ್ಲ ಕಾರಣ ಆರೋಪಿ ಓಡಿ ಹೋಗಿರುತ್ತಾರೆ. ಆರೋಪಿ ಓಡಿ ಹೋಗಿದ್ದಾನೆ ಎಂದು ಪ್ರ.ವ.ವರದಿಯಲ್ಲಿ ಬರೆದಿರುವುದಿಲ್ಲ. ಪ್ರ.ವ.ವರದಿಯ ಕಲಂ 9(ಸಿ) ನಲ್ಲಿ ಯಾವುದೇ ನಮೂದು ಮಾಡಿಲ್ಲ ಎಂದರೆ ಸರಿ. ಕಲಂ9(ಇ) ನಲ್ಲಿ ಆರೋಪಿಯ ಬಗ್ಗೆ ಯಾವುದೇ ವಿವರಣೆಗಳನ್ನು ಕಾಣಿಸಿರುವುದಿಲ್ಲ ಕಾರಣ ಆತ ಓಡಿ ಹೋಗಿರುತ್ತಾರೆ. ಆ ರೀತಿ ಆರೋಪಿ ಓಡಿ ಹೋಗಿದ್ದಾನೆ ಎಂದು ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ.

ಶೋಧನಾ ಸಮುಚ್ಚಿತವನ್ನು ನಾವೇ ಸ್ಥಳದಲ್ಲಿ ತಯಾರಿಸಿರುತ್ತೇವೆ. ನಿಪಿ-5 ರ ಫಾರಂನ್ನು ತೆಗೆದುಕೊಂಡು ಹೋಗಿ ಸ್ಥಳದಲ್ಲಿ ಭರ್ತಿ ಮಾಡಿರುತ್ತೇವೆ. ತಕ್ಷೀರು ಸ್ಥಳದಲ್ಲಿ ವಶಕ್ಕೆ ಪಡೆದ ಮದ್ಯಗಳು ಯಾವ ರೀತಿಯ ಮದ್ಯವೆಂದು ತನಿಖೆಯಾಗಬೇಕಾಗಿದ್ದ ಕಾರಣ ಅದನ್ನು ವಿವರಿಸಿರುವುದಿಲ್ಲ. ನೋಡಿದಾಗ ಅದು ಮದ್ಯವೆಂದು ಕಂಡು ಬಂದಿರುತ್ತದೆ. ಶೋಧನಾ ಸಮುಚ್ಚಿತವನ್ನು ತಯಾರು ಮಾಡುವಾಗ ಬೇರೆ ಯಾರೂ ಸಹಿ ಮಾಡಿಲ್ಲ.

ಪಂಚನಾಮೆ ತಯಾರಿಸುವಾಗ 48 ಟೇಟ್ರಾ ಪ್ಯಾಕೇಟುಗಳು 48 ಪ್ಲಾಸ್ಟಿಕ್ ಬಾಟಲಿಗಳನ್ನು ವಶಕ್ಕೆ ಪಡೆದಿರುತ್ತೇವೆ. ವಶಕ್ಕೆ ಪಡೆದ ಒಟ್ಟು ಟೇಟ್ರಾ ಪ್ಯಾಕೇಟುಗಳ ಪೈಕಿ ಪರೀಕ್ಷೆಗೆ ಒಳಪಡಿಸಿ ಮಿಕ್ಕ ಪ್ಯಾಕೇಟುಗಳನ್ನು ಕಚೇರಿಯಲ್ಲಿ ಇರಿಸಿರುತ್ತೇವೆ. ಮಿಕ್ಕ ಸ್ವತ್ತುಗಳನ್ನು ಕಚೇರಿಯಲ್ಲಿ ಇರಿಸಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನೀಡಿರುತ್ತೇವೆ. ಮುಮಾ1 ರ ಮೇಲೆ ಇರುವ ಭದ್ರತಾ ಚೀಟಿಯಲ್ಲಿ ಸಂಖ್ಯೆ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಸದ್ರಿ ಮದ್ಯ ಆರೋಪಿಯ ವಶಕ್ಕೆ ಹೇಗೆ ಬಂತು ಎಂದು ನನ್ನ ತನಿಖಾ ವೇಳೆಯಲ್ಲಿ ವಿಚಾರಿಸಿರುವುದಿಲ್ಲ. ನ್ಯಾಯಾಲಯದ ಮುಂದೆ

ಹಾಜರುಪಡಿಸಲಾದ ಟೇಟ್ರಾ ಪ್ಯಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲಾಗಿರುತ್ತದೆ. ವಶಕ್ಕೆ ಪಡೆದ ಉಳಿದ ಪ್ಯಾಕೇಟುಗಳು ಯಾವ ರೀತಿಯಲ್ಲಿ ಈಗ ಇದೆ ಎಂದು ನಾನು ನೋಡಿರುವುದಿಲ್ಲ. ವಶಕ್ಕೆ ಪಡೆದ ಬಾಟಲಿಗಳ ಮೇಲೆ ಲೇಬಲ್ ಇದೆ ಎಂದರೆ ಸಾಕ್ಷಿಯು ಭದ್ರತಾ ಲೇಬಲ್ ಇಲ್ಲ ಎಂದು ನುಡಿಯುತ್ತಾರೆ.

ನಾವು ವಶಕ್ಕೆ ಪಡೆಯುವ ವೇಳೆಯಲ್ಲಿ ಯಾವುದೇ ಬಾಟಲಿ ಅಥವಾ ಪ್ಯಾಕೇಟು ತೆರೆದಿರಲಿಲ್ಲ. ನಾನು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನೋಡಿರುವುದಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ. ಪಂಚನಾಮೆಯನ್ನು ಅದೇ ದಿನ ಸ್ಥಳದಲ್ಲಿ ಸಂಜೆ 6-30 ರಿಂದ 7-30ರ ತನಕ ಜರುಗಿಸಿರುತ್ತೇವೆ. ಆರೋಪಿಯ ಮನೆಯ ಆವರಣದಲ್ಲಿ ವಿದ್ಯುತ್ ಬೆಳಕಿನ ಸಹಾಯದಿಂದ ಬರೆದಿರುತ್ತೇವೆ. ಆ ಬಗ್ಗೆ ನಿಪಿ-1 ರಲ್ಲಿ ನಮೂದಿಸಿರುತ್ತೇವೆ. ಪಂಚನಾಮೆಯನ್ನು ಯಾವ ದಿನ ಯಾವ ವೇಳೆಯಲ್ಲಿ ಜರುಗಿಸಿರುವುದು ಎಂದು ನಮೂದಿಸಿರುತ್ತೇವೆ.

ನಾನು ಮೇಲೆ ಹೇಳಿದ ಸ್ಥಳ ಮತ್ತು ಸಮಯದಲ್ಲಿ ಸಾಕ್ಷಿದಾರರ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕುಡಿಯುವ ಅಭ್ಯಾಸ ಇರುವ ಬಗ್ಗೆ ನನಗೆ ತಿಳಿದಿಲ್ಲ. ಒಬ್ಬ ವ್ಯಕ್ತಿ 2.30 ಲೀಟರ್ ನ ಮದ್ಯವನ್ನು ಇಟ್ಟುಕೊಳ್ಳುವ ಅವಕಾಶ ಇರುತ್ತದೆ. ಮನೆಯಲ್ಲಿ ಇದ್ದ ಪ್ರತಿ ವ್ಯಕ್ತಿಯ ಬಳಿ ಆ ರೀತಿ 2.30ಲೀಟರ್ ಮದ್ಯವನ್ನು ಹೊಂದಲು ಅವಕಾಶ ಇದೆ ಅಥವಾ ಇಲ್ಲಾ ಎಂದು ತೋರಿಸಲು ಈಗ ಯಾವುದೇ ದಾಖಲಾತಿ ಇಲ್ಲ. ಸಾಮಾನ್ಯವಾಗಿ ಯಾವುದೇ ಹಳ್ಳಿಯಲ್ಲಿ ಕಾರ್ಯಕ್ರಮ ಇರುವ ಹಿಂದಿನ ದಿನ ಮದ್ಯವನ್ನು ಶೇಖರಿಸಿ ಇಡುತ್ತಾರೆ ಎಂದರೆ ಸಾಕ್ಷಿಯು ಪರಾವನಿಗೆ ಹೊಂದಿರಬೇಕು ಎಂದು ನುಡಿಯುತ್ತಾರೆ.

ನಾನು ವಶಕ್ಕೆ ಪಡೆದಾಗ ಸದ್ರಿ ಸ್ವತ್ತುಗಳು ಮೇಲ್ನೋಟಕ್ಕೆ ಮದ್ಯ ಎಂದು ಕಂಡು ಬಂದಿರುತ್ತದೆ. ಸ್ಥಳ ಪಂಚನಾಮೆಗೆ ಹಾಜರು ಇದ್ದ ಪಂಚರ ಬಳಿ ಮದ್ಯದ ಬಗ್ಗೆ ನಾನು ವಿಚಾರಿಸಿಲ್ಲ. ಯಾವುದೇ ಮದ್ಯದ ಅಂಗಡಿಗೆ ನಿರ್ಧಿಷ್ಟ ಪ್ರಮಾಣದ ಮದ್ಯವನ್ನು ಮಾರಾಟ ಮಾಡಬೇಕೆಂಬ ಯಾವುದೇ ಷರತ್ತು ಇರುವುದಿಲ್ಲ. ಯಾವುದೇ ಮದ್ಯದ ಅಂಗಡಿಯವರು ಮಾರಾಟ ಮಾಡಬೇಕಾದರೆ ಎಷ್ಟು ಪ್ರಮಾಣದಲ್ಲಿ ಮಾರಾಟ ಮಾಡಬೇಕೆಂಬ ನಿಬಂಧನೆಗಳು ಇರುತ್ತದೆ. ಯಾವುದೇ ಅಬಕಾರಿ ಅಕ್ರಮಗಳು ತಿಳಿದು ಬಂದರೆ ನಮ್ಮ ಇಲಾಖೆಯ ಸಿಬ್ಬಂದಿಗಳು ಮೊದಲು ಸ್ಥಳಕ್ಕೆ ಭೇಟಿ ನೀಡುವುದು ಎಂದರೆ ಸರಿ. ತಕ್ಷೀರು ಸ್ಥಳಕ್ಕೆ ಹತ್ತಿರವಾದ ಪೇಟೆ ಅಜ್ರಿ ಅಥವಾ ಸಿದ್ದಾಪುರ.

ಯಾವುದೇ ವ್ಯಕ್ತಿ ಮೇಲೆ ಕಾಣಿಸಿದ ಮದ್ಯವನ್ನು ಸದ್ರಿ 2 ಪೇಟೆಗಳಲ್ಲಿ ಖರೀದಿಸಿರುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ನಮ್ಮ ಇಲಾಖಾ ವತಿಯಿಂದ ಪ್ರತಿ ತಿಂಗಳಿಗೆ ಎಷ್ಟು ಪ್ರಕರಣಗಳನ್ನು ದಾಖಲಿಸಬೇಕೆಂಬ ಯಾವುದೇ ನಿರ್ಬಂಧನೆ ಇರುವುದಿಲ್ಲ.

ನಾನು ಸದ್ರಿ ದಿನ ಮೇಲೆ ಹೇಳಿದ ಸ್ಥಳಕ್ಕೆ ಭೇಟಿ ನೀಡಿ, ಆರೋಪಿ ಸ್ಥಳದಲ್ಲಿ ಇಲ್ಲದೆ ನಾವೇ ಸ್ವತ್ತುಗಳನ್ನು ತೆಗೆದುಕೊಂಡು ಹೋಗಿ ಆರೋಪಿಯ ವಿರುದ್ದ ಒಂದು ಪ್ರಕರಣ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪಂಚರ ಬಳಿ ಇದ್ದ ಮಾಲನ್ನು ಈ ಪ್ರಕರಣದಲ್ಲಿ ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ. ವಶಕ್ಕೆ ಪಡೆದಿದ್ದ ಎಲ್ಲಾ ಸ್ವತ್ತುಗಳನ್ನು ರಾಸಾಯನಿಕ ಪ್ರಯೋಗಲಾಯಕ್ಕೆ ಕಳುಹಿಸದೆ ಕಾನೂನು ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಡೆದಾಡಲು ಸಹ ಆಗದೆ ಇರುವಂತಹ ವಯಸ್ಸಿನ ವ್ಯಕ್ತಿ ಆರೋಪಿಯಾಗಿರುತ್ತಾನೆ ಎಂದರೆ ಸರಿಯಲ್ಲ. ಆತನನ್ನು ಹೆದರಿಸಿ ಲಾಭ ಪಡೆಯುವ ದುರುದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ. ದ. ನ್ಯಾ. ದಂ. ಕುಂದಾಪುರ**